ಸಾಕ್ಷಿಯನ್ನು ಕರೆಸಿ ದಿಃ 30/08/2018 ರಂದು ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲು: ಅರ್ಜಿಯ ಆದೇದಶ ಮೇರೆಗೆ 7ನೇ ಪ್ರತಿವಾದಿಯ ಪರವಾಗಿ ಶ್ರೀ. ಇ.ಎನ್. ವಕೀಲರಿಂದಃ**

23) ನಮ್ಮ ತಂದೆ ತಾಯಿಗೆ ನಾವು ಒಟ್ಟು 8 ಜನ ಮಕ್ಕಳು ಎಂದರೆ ಸರಿ. ಅರದಲ್ಲಿ ನಾನು 7ನೇಯವನು. ನನ್ನ ಮದುವೆ 1985 ನೇ ಇಸವಿಯಲ್ಲಿಯಾಯಿತು. ನನ್ನ ಮದುವೆ ಶಿವಮೊಗ್ಗದಲ್ಲಿ ನಡೆಯಿತು. ನನಗೆ ನನ್ನ 31-32 ನೇ ವಯಸ್ಸಿನಲ್ಲಿ ಮದುವೆಯಾಗಿರುತ್ತದೆ. ನನ್ನ ಇಬ್ಬರೂ ಮಕ್ಕಳಿಗೆ ಮದುವೆಯಾಗಿರುತ್ತದೆ. ನಾನು ಶಿವಮೊಗ್ಗದಲ್ಲಿ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ಹೇಳುತ್ತಾರೆ ತಾನು ಶಿವಮೊಗ್ಗದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಮೊದಲನೇ ಮಗ ಜೈನ್ ಪಬ್ಲಿಕ್ ಶಾಲೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾನೆ. ನನ್ನ ಇನ್ನೊಬ್ಬ ಮಗ ಚಿನ್ನದ ಕೆಲಸ ಮಾಡುತ್ತಿದ್ದಾನೆ. ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಇರುವ ನಾನೇ ಯಜಮಾನ ಎಂದರೆ ಸರಿ. ನಾನು ಮದುವೆಯಾದಂದಿನಿಂದ ನನ್ನ ಸದರಿ ಕುಟುಂಬಕ್ಕೆ ನಾನೇ ಯಜಮಾನ ಎಂದರೆ ಸರಿ.

24) ಅದೇ ರೀತಿ ನನ್ನ ಸಹೋದರರು ಸಹ ಅವರರವರ ಕುಟುಂಬಕ್ಕೆ ಅವರರವರೇ ಯಜಮಾನರು ಎಂದರೆ ಸರಿ. ನನ್ನ ಸಹೋದರರು ಅವರರವರ ಕುಟುಂಬದ ಹಣಕಾಸಿನ ವ್ಯವಹಾರವನ್ನು ಅವರರವರೇ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಕುಟುಂಬದ ಹಣಕಾಸಿನ ವ್ಯವಹಾರವನ್ನು ನಾನೇ ಮಾಡುತ್ತಿದ್ದೇನೆ ಎಂದರೆ ಸರಿ. 2ನೇ ವಾದಿಯ ತಂದೆ ನನ್ನ ಹಿರಿಯ ಅಣ್ಣ ಎಂದರೆ ಸರಿ. 6ನೇ ಪ್ರತಿವಾದಿಯ ತಂದೆ ನಮ್ಮ ತಂದೆ ತಾಯಿಯ 2ನೇ ಮಗ. 2ನೇ ಪ್ರತಿವಾದಿ ನಮ್ಮ ತಂದೆ ತಾಯಿಯ 3ನೇ ಮಗ. 1ನೇ ಪ್ರತಿವಾದಿ ನಮ್ಮ ತಂದೆ ತಾಯಿಯ 4ನೇ ಮಗ. ನಾನು ಮತ್ತು ನನ್ನ ಸಹೋದರರು ಗಳಿಸಿರುವಂತ ಚರ ಸ್ವತ್ತುಗಳಿಗೆ ನಾವೇ ಮಾಲೀಕರು ಎಂದರೆ ಸರಿ.

25) 2ನೇ ಪ್ರತಿವಾದಿಯು ಸಣ್ಣ ಮನೆ ಇದ್ದ ಜಾಗವನ್ನು ತೆಗೆದುಕೊಂಡು ಅದರಲ್ಲಿ ವಾಸ ಮಾಡುತ್ತಿದ್ದಾರೆ. 3ನೇ ಪ್ರತಿವಾದಿ ಒಂದು ಜಾಗವನ್ನು ಖರೀದಿ ಮಾಡಿ ಅದರಲ್ಲಿ ಮನೆಯನ್ನು ಕಟ್ಟಿ, ಅರದಲ್ಲಿ ವಾಸ ಮಾಡಿ ನಂತರ ಅದನ್ನು ಮಾರಾಟ ಮಾಡಿರುತ್ತಾರೆ. ನನ್ನ ಅಣ್ಣನಾದ ಕೃಷ್ಣಮೂರ್ತಿಯ

ಮದುವೆ 1961 ನೇ ಇಸವಿಯಲ್ಲಿಯಾಗಿರುತ್ತದೆ. ನನ್ನ ಮತ್ತು ನನ್ನ ಸಹೋದರರ ಕುಟುಂಬಕ್ಕೆ 1ನೇ ಪ್ರತಿವಾದಿಯು ಯಾವತ್ತು ಸಹ ಕರ್ತ ಆಗಿಲ್ಲ ಎಂದರೆ ಸರಿ. ಅದೇ ರೀತಿ 1ನೇ ಪ್ರತಿವಾದಿಯು ನಮ್ಮ ಕುಟುಂಬದ ಯಜಮಾನಿಕೆಯನ್ನು ಮಾಡಿಲ್ಲ ಎಂದರೆ ಸರಿ.

26) ದಾವಾ ಸ್ವತ್ತಿನಲ್ಲಿ ಬಹಳ ವರ್ಷಗಳಿಂದ 1ನೇ ಪ್ರತಿವಾದಿ ಮಾತ್ರ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಶಿವಮೊಗ್ಗಕ್ಕೆ ಹೋಗುವ ಪೂರ್ವದಲ್ಲಿ ದಾವಾ ಸ್ವತ್ತಿನಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದೆವು. ನಾವು ಬೇರೆ ಬೇರೆ ಕಡೆಯಲ್ಲಿ ವಾಸ ಮಾಡಲು ಪ್ರಾರಂಭ ಮಾಡಿದ ನಂತರ 1ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ದಾವಾ ಸ್ವತ್ತಿಗೆ ಬಂದು ಹೋಗುತ್ತಿದ್ದೇವೆ ಹಾಗು ತನ್ನ ತಂದೆ ಇರುವಾಗ ದಾವಾ ಸ್ವತ್ತಿನಲ್ಲಿ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

27) ಅಂದಿನ ಪುರಸಭೆಯವರು ಯಾವ ಯಾವ ಆಸ್ತಿ ಯಾರ್ಯಾರ ಸ್ವಾಧೀನದಲ್ಲಿ ಇವೆ ಎಂಬ ಬಗ್ಗೆ ಒಂದು ಪಟ್ಟಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ಪಟ್ಟಿಯ ಪ್ರಕಾರ ಸದ್ರಿ ಆಸ್ತಿಗಳ ಬಗ್ಗೆ ಕ್ರಯ ಪತ್ರ ಮಾಡಿ ಕೊಡುತ್ತೇವೆ ಎಂದು ನೋಟಿಸನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ನೋಟಿಸನ್ನು ಪುರಸಭೆಯವರು 1ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ನೋಟಿಸನ್ನು ನನ್ನ ತಂದೆಗೆ ಕೊಟ್ಟಿರುತ್ತಾರೆ. ಸದ್ರಿ ನೋಟಿಸನ್ನು ಪುರಸಭೆಯವರು 1ನೇ ಪ್ರತಿವಾದಿಗೆ ಕೊಟ್ಟಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುರಸಭೆಯವರು ದಾವಾ ಸ್ವತ್ತಿಗೆ ನಿಗದಿ ಪಡಿಸಿದ್ದ ಹಣವನ್ನು 1ನೇ ಪ್ರತಿವಾದಿಯು ಕಂತಿನ ರೂಪದಲ್ಲಿ ಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಅನಧೀಕೃತವಾಗಿ ಸ್ವಾಧೀನದಲ್ಲಿ ಇದ್ದದ್ದನ್ನು ಪರಿಗಣಿಸಿಯೇ ಪುರಸಭೆಯವರು 1ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

28) ನನ್ನ ತಂದೆ ದಿನಾಂಕಃ 16-08-1982 ನೇ ಇಸವಿಯಲ್ಲಿ ತೀರಿ ಹೋಗಿರುತ್ತಾರೆ. ಮೇಲೆ ಹೇಳಿದ ಪಟ್ಟಿಯನ್ನು ಸರ್ಕಾರದ ಆದೇಶದ ಮೇರೆಗೆ ಪುರಸಭೆಯವರು ನನ್ನ ತಂದೆ ಜೀವಂತ ಇದ್ದಾಗ ತಯಾರು ಮಾಡಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ಕ್ರಯಪತ್ರವನ್ನು 1ನೇ ಪ್ರತಿವಾದಿಗೆ ಆಗಿನ

ಪುರಸಭೆಯವರು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಏಕಮಾತ್ರ ಸ್ವಾಧೀನಾದರರಾಗಿ ಅನುಭವಿಸಿಕೊಂಡು ಬಂದಿದ್ದರಿಂದ ಪುರಸಭೆಯವರು ಹಣವನ್ನು ಕಟ್ಟಿಸಿಕೊಂಡು ದಾವಾ ಸ್ವತ್ತಿನ ಬಗ್ಗೆ ಅವರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಕ್ರಯಪತ್ರವನ್ನು 1ನೇ ಪ್ರತಿವಾದಿಯು ಎಷ್ಟನೇ ಇಸವಿಯಲ್ಲಿ ಬರೆಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 1984ನೇ ಇಸವಿಯಲ್ಲಿ 1ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಖರೀದಿ ಮಾಡಲು 1,700 ರೂಪಾಯಿಯನ್ನು ಕೊಟ್ಟಿರುತ್ತೇನೆ. ಆ ರೀತಿ ನಾನು ದುಡ್ಡು ಕೊಡದಿದ್ದರು ಸಹ ದುಡ್ಡು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29) 7ನೇ ಪ್ರತಿವಾದಿಯ ಪರಿಚಯ ನನಗೆ ಇದೆ. 7ನೇ ಪ್ರತಿವಾದಿ ನನ್ನ ದಾಯಾದಿ ಆಗಿರುತ್ತಾರೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನಾವು ರಕ್ತೇಶ್ವರಿ ದೇವಸ್ಥಾನಕ್ಕೆ ಬಿಟ್ಟುಕೊಟ್ಟಿರುವ ಸ್ವತ್ತು ಇದೆ. ಸದ್ರಿ ಸ್ವತ್ತು ನಾವು ಮೇಲೆ ಹೇಳಿದ ದೇವಸ್ಥಾನಕ್ಕೆ ಬಿಟ್ಟುಕೊಟ್ಟಿರುವ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಸದ್ರಿ ಸ್ವತ್ತು ಮೇಲೆ ಹೇಳಿದ ದೇವಸ್ಥಾಕ್ಕೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮ ಭಾಗದ 30 ಇಂಟು 89 ಅಡಿ ಜಾಗವನ್ನು 7ನೇ ಪ್ರತಿವಾದಿಯ 1ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ಕೇರ್ ಆಫ್ ಎಂದು ಬೆರಳಚ್ಚು ಮಾಡಿರುತ್ತಾರೆ ಎಂದರೆ ಸರಿ. ನಿಪಿ.11 ರಲ್ಲಿ ಕೇರ್ ಆಫ್ ಎಂದು ಬೆರಳಚ್ಚು ಮಾಡಿರುತ್ತಾರೆ ಎಂದರೆ ಸರಿ.

30) ನಾವು ದುಡಿಮೆಯ ವಯಸ್ಸಿಗೆ ಬಂದ ನಂತರ ದುಡಿಯುವ ಸಲುವಾರಿ ಬೇರೆ ಬೇರೆ ಊರಿಗೆ ಹೋಗಿರುತ್ತೇವೆ ಎಂರದೆ ಸರಿ. ಆ ಸಂದರ್ಭದಲ್ಲಿ ನಮ್ಮ ವಯಸ್ಸಾದ ತಂದೆ ಮತ್ತು 1ನೇ ಪ್ರತಿವಾದಿ ದಾವಾ ಮನೆಯಲ್ಲ ಇದ್ದರು ಎಂದರೆ ಸರಿ. ದಾವಾ ಸ್ವತ್ತಿಗೆ 1965ನೇ ಇಸವಿಯಲ್ಲಿ ವಿದ್ಯುತ್ ಸಂಪರ್ಕ ಬಂದಿರುತ್ತದೆ. ಆ ಸಂದರ್ಭದಲ್ಲಿ 3ನೇ ಪ್ರತಿವಾದಿಯ ಕೆ.ಇ.ಬಿ. ಗುತ್ತಿಗೆದಾರರು ಆಗಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ದಾವಾ ಸ್ವತ್ತಿನ ಬಗ್ಗೆ ಪೌತಿ ಸಬೂಬು ಖಾತೆಯಾಗಿಲ್ಲ ಎಂದರೆ ಸರಿ. ಪುರಸಭೆಯವರು 1ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಸೇಲ್ ಸರ್ಟಿಫಿಕೇಟ್‌ನ ಆಧಾರದ ಮೇರೆಗೆ ದಾವಾ ಸ್ವತ್ತಿನ ಖಾತೆಯನ್ನು 1ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯು ತನ್ನ ಕಷ್ಟಕ್ಕೆ ಮೇಲೆ ಹೇಳಿದ

ಸ್ವತ್ತನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದ ಮೇರೆಗೆ 7ನೇ ಪ್ರತಿವಾದಿಯು ಇಷ್ಟಪಟ್ಟು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

31) ಈ ದಾವೆಯನ್ನು ಸಲ್ಲಿಸುವಾಗ ದಾವಾ ಸ್ವತ್ತಿನ ಖಾತಾ ಎಕ್ಸ್ಟ್ರಾಕ್ಟ್‌ನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಅ ರೀತಿ ಸದ್ರಿ ದಾಖಲೆಯನ್ನು ನೋಡಿದಾಗ 7ನೇ ಪ್ರತಿವಾದಿಯ ಹೆಸರು ದಾವಾ ಸ್ವತ್ತಿನಲ್ಲಿ ತಾನು ಖರೀದಿ ಮಾಡಿದ ಮೇಲೆ ಹೇಳಿದ 30 ಇಂಟು 89 ಅಡಿ ಜಾಗದ ದಾಖಲೆ 7ನೇ ಪ್ರತಿವಾದಿಯ ಹೆಸರಲ್ಲಿ ಇತ್ತು ಎಂದರೆ ಸರಿಯಲ್ಲ. ಸದ್ರಿ ಸ್ವತ್ತನ್ನು 7ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ಆರು ಲಕ್ಷದ ಆರವತ್ತೆಂಟು ಸಾವಿರ ರೂಪಾಯಿ ಕೊಟ್ಟು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಸ್ವತ್ತನ್ನು ಖರೀದಿ ಮಾಡಿದ ಲಾಗಯತ್ತಿನಿಂದ 7ನೇ ಪ್ರತಿವಾದಿಯು ಸ ದ್ರಿ ಸ್ವತ್ತಿಗೆ ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

32) ದಾವಾ ಸ್ವತ್ತನ್ನು 1ನೇ ಪ್ರತಿವಾದಿಯು ಗಣಪತಿ ಬ್ಯಾಂಕಿಗೆ ಆಧಾರ ಮಾಡಿ ಸಾಲ ತೆಗದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿ ಹೋದ ನಂತರ ನಮಗೆ ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿರಬೇಕೆಂಬ ಇಚ್ಛೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳ ನಾಮಕರಣವನ್ನಾಗಲಿ, ನಿಶ್ಚಿತಾರ್ಥವನ್ನಾಗಲಿ ಅಥವಾ ಮದುವೆಯನ್ನಾಗಲಿ ನಾನು ದಾವಾ ಮನೆಯಲ್ಲಿ ಮಾಡಿಸಿರುವುದಿಲ್ಲ. ಅದೇ ರೀತಿ 2, 3 ಮತ್ತು ದೊಡ್ಡ ಅಣ್ಣನ ಮಕ್ಕಳ ನಿಶ್ಚಿತಾರ್ಥವನ್ನಾಗಲಿ ಮದುವೆಯನ್ನಾಗಲಿ ದಾವಾ ಸ್ವತ್ತಿನಲ್ಲಿ ಮಾಡಿಸಿರುವುದಿಲ್ಲ. ದಾವಾ ಸ್ವತ್ತಿನ ದಾಖಲೆಯನ್ನು ನೋಡಿ ಹಾಗು ನಮ್ಮನ್ನು ಯಾರನ್ನು ಸಹ 7ನೇ ಪ್ರತಿವಾದಿಯು ನೋಡದೆ ಇರುವುದರಿಂದ ಮೇಲೆ ಹೇಳಿದ ಸ್ವತ್ತನ್ನು 7ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

33) ದಾವಾ ಸ್ವತ್ತನ್ನು ಪುರಸಭೆಯವರು 1ನೇ ಪ್ರತಿವಾದಿಯ ಹೆಸರಿಗೆ ಒಟ್ಟು ಕುಟುಂಬದ ಹೆಸರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನಗೆ ಯಾವುದು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ, 7ನೇ ಪ್ರತಿವಾದಿಯು ಸದ್ರಿ ಸ್ವತ್ತನ್ನು 1ನೇ ಪ್ರತಿವಾದಿಗೆ ಯೋಗ್ಯಪ್ರತಿಫಲವನ್ನು ಕೊಟ್ಟು ಖರೀದಿ ಮಾಡಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 1ನೇ ಪ್ರತಿವಾದಿಯ ಸದ್ರಿ ಸ್ವಯಾರ್ಜಿತ ಸ್ವತ್ತನ್ನು 7ನೇ

ಪ್ರತಿವಾದಿಯು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ದಾವಾ ಸ್ವತ್ತು ಪ್ರಿತಾರ್ಜಿತ ಸ್ವತ್ತು ಆಗದೆ ಇದ್ದರೂ ಸಹ ಪ್ರಿತಾರ್ಜಿತ ಸ್ವತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 7ನೇ ಪ್ರತಿವಾದಿಯು 1ನೇ ಪ್ರತಿವಾದಿಯಿಂದ ಖರೀದಿ ಮಾಡಿರುವ ಸ್ವತ್ತಿಗೆ 7ನೇ ಪ್ರತಿವಾದಿಯೇ ಮಾಲೀಕರು ಎಂದರೆ ಸರಿಯಲ್ಲ,

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದೆ.)**

ಓ ಹೇ ಕೇ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ.